II. ಪ್ಲಾನ್ ಮತ್ತು ಅಂದಾಜು ಷರತ್ತು ವಗೈರೆ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫಿಸಿನಲ್ಲಿ ಪ್ರಾತಃಕಾಲ 11 ಘಂಟೆ ಲಾಗಾಯತು ಸಾಯಿಂಕಾಲ 4 ಘಂಟೆ ವರಿವಿಗೆ ನೋಡಲು ಅವಕಾಶ ಕೊಡಲ್ಪಡುತ್ತೆ.

III. ದರಖಾಸ್ತುಗಳು ಅಚ್ಚು ಹಾಕಿದ ಫಾರಂನಲ್ಲಿ ಬರಿಯಬೇಕು. ಈ ಫಾರಂಗಳು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫಿಸಿನಲ್ಲಿ ದೊರೆಯುತ್ತವೆ. ಈ ಕೆಳಗೆ ಕಾಣಿಸಲ್ಪಟ್ಟಿರುವ ಸ್ಟೇಟ್‌ಮೆಂಟ್ ಪ್ರಕಾರ ಬಂದು ಸ್ಟೇಟ್‌ಮೆಂಟ್ ಲಗತ್ತು ಮಾಡಿರಬೇಕು. ಅದರಲ್ಲಿ ಕಂಟ್ರಾಕ್ಟುದಾರನು ಯಾವ ರೇಟ್ ಪ್ರಕಾರ ಪ್ರತಿ ಐಟಂಗಳ ಕೆಲಸವನ್ನು ಮಾಡಿಸಬಲ್ಲನೋ ಆ ರೇಟನ್ನು ಅಥವಾ ಆ ದರವನ್ನು ನಮೂದು ಮಾಡಬೇಕು.

ಫಾರಂ.

ಕೆಲಸದ ವಿವರ.	ಕ್ಕೆ.	ಪ್ರೊತ್ತ.	ದರ.	ಪೊಬಲಗು.
ಯೇರಿ.				
ಮಂಣು ಕೆಲಸ	ಸಲೆಗಜ	38272		
ಹೆಪ್ಪು ಕೆಲಸ	ಚದರ	66·42		
ಹಳೇಕಲ್ಲು ಕೆಲಸ	ಸಲೆಗಜ	350		
ಹೊಸಕಲ್ಲು ಕೆಲಸ	ಡಿಟೋ	3587		
ಗ್ರೇಡ್ ಕಲ್ಲು	1ಕ್ಕೆ	24		
ಬಿ. ಯಂ. ಕಲ್ಲು	ಡಿಟೋ	2		
ಗೇಜು ಕಲ್ಲು	ಡಿಟೋ	1		
ತಲಾವ್ ನಂಬರ್ ಕಲ್ಲು	ಡಿಟೋ	1		
ಜುಮ್ಲಾ				
200 ಅಡಿ ಲಾಂಬಿಯು ಯಷಪೂರ್ವದ ಕೋಡಿ.				
ಪಾಯಬೋದಿ	ಸಲೆಗಜ	4533		
ಗಚ್ಚು ಮತ್ತು ಕಾಡುಕಲ್ಲು	ಸಲೆ ಅಡಿ	1473		
ಚಪ್ಪಡಿ ಕಲ್ಲು	ಚದರ ಅಡಿ	1046		
ಕಾಡುಕಲ್ಲು ಕೆಲಸ	ಸಲೆಗಜ	369		
ಹಳೇಕಲ್ಲು ಕೆಲಸ	ಡಿಟೋ	230		
ಜುಮ್ಲಾ				
ಡಿಸ್ಟ್ರಿಬ್ಯೂರ್ಷ.				
ಹೊಸ ನಾಲಾ ತೆಗಿಸುವದು	ಪ್ರೊತ್ತ.			
ಮಿಸ್ ಲೇನಿಯಸ್.				
ಜಮೀರ್‌ಗಳ ಕಂಪೆಕೇಷ್ಟ	ಡಿಟೋ			

IV. ಪ್ರತಿ ಬಂದು ದರಖಾಸ್ತಿನ ಸಂಗಡಲೂ 100 ರೂಪಾಯಿಗಳ ಸರ್ಕಿಸಿ ನೋಟುಗಳಾಗಲಿ, ಗವರ್ನಮೆಂಟ್ ಪ್ರಾಂಸರಿ ಆಗಲಿ ಅಥವಾ ನಗದಾಗಲಿ ಡಿಪಾಜಿಟ್ ಹಣವನ್ನು ತೇವಣಾತಿಯಾಗಿ ಹಾಜರ್ಮಾಡಬೇಕು, ಮತ್ತು ಲಕೋಟೆ ಮೇಲೆ ಕೊಪ್ಪದ ತಲಾವ್ ಕಾಂಗಾರಿಬಗ್ಗೆ ದರಖಾಸ್ತೆಂಬದಾಗಿ ಬರಿಯಬೇಕು, ತಪ್ಪಿದಲ್ಲಿ ಅಂಥಾ ದರಖಾಸ್ತುಗಳನ್ನ ತಿರಸ್ಕರಿಸಲಾಧೀತು.

V. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡತಕ್ಕದ್ದಕ್ಕೆ ಚೀಫ್ ಇಂಜಿನಿಯರ್ ಸಾಹೆಬರವರು ಸ್ವತಂತ್ರರಾಗಿರುತ್ತಾರೆ. ಹಾಗೆ ಮಂಜೂರ್ಮಾಡತಕ್ಕದ್ದರಲ್ಲಿ ಕೀಳ್ಪಟ್ಟ ದರಖಾಸ್ತನ್ನೇ ಆಗಲಿ ಅಥವಾ ಯಾವದೇ ಆಗಲಿ ವಪ್ಪಿಕೊಳ್ಳಬೇಕೆಂಬ ನಿರ್ಬಂಧವಿರುವದಿಲ್ಲ ಮತ್ತು ತಿರಸ್ಕರಿಸಿದ ದರಖಾಸ್ತುಗಳಿಗೆ ಕಾರಣಗಳನ್ನು ಕೊಡುವದಿಲ್ಲಾ.

VI. ಯಾವ ದರಖಾಸ್ತನ್ನೇ ಆಗಲಿ ಮಂಜೂರ್ಮಾಡಿದ 8 ದಿನಗಳ ವಳಗಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಕಂಟ್ರಾಕ್ಟು ಬಾಂಡ್ ಎಂಬ ಕರಾರು ಪತ್ರವನ್ನ ಬರದುಕೊಡಬೇಕು. ತಪ್ಪಿದಲ್ಲಿ ಅವನ ದರಖಾಸ್ತು ರದ್ದು ಮಾಡಲ್ಪಟ್ಟು ತೇವಣಾತಿ ಹಣವನ್ನ ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ.

VII. ಮಂಜೂರಾದ ದರಖಾಸ್ತುದಾರನ ಹೆಸರು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫಿಸ್ ಮುಂಭಾಗದಲ್ಲಿ ನೋಟಿಸ್ ಬೋರ್ಡ್ ಮೇಲೆ ಬರದು ಚಿಕಟುಯಿಸಲ್ಪಡುತ್ತೆ. ಅಂಗೀಕರಿಸಿದ ಅಥವಾ ತಿರಸ್ಕರಿಸಿದ ದರಖಾಸ್ತುದಾರರುಗಳ ವಿಷಯದಲ್ಲಿ ಯಾವದೊಂದು ಜವಾಬೂ ದೊರಿಯಲಾರದು.

VIII. ಯಾವದಾದರೂ ದರಖಾಸ್ತು ಮಂಜೂರಾದನಂತರ ತಿರಸ್ಕರಿಸಲ್ಪಟ್ಟ ದರಖಾಸ್ತುದಾರರ ಹಣವನ್ನ ಅವರಿಗೆ ವಾಪಸ್ ಮಾಡಲ್ಪಡುತ್ತೆ.

ಟಿ. ಇರ್ಮ್ಯಾ,
ಎಗ್ಜಿಕ್ಯೂಟಿವ್ ಇಂಜಿನಿಯರ್.

ಹಾಸನ ಡಿಸ್ಟ್ರಿಕ್ಟು.
ಬೇಲೂರು ತಾಲ್ಲೂಕು.
ಇನ್ಸಿ ಹಾರ್‌ನಾವು.

ತಾರೀಖು 25ನೇ ಏಪ್ರೆಲ್ ಸ್ಯ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಬೇಲೂರು ತಾಲ್ಲೂಕು ದೊಡ್ಡಬಿಕ್ಕೋಡು ಗ್ರಾಮದಲ್ಲಿ ಇರುವ ಇ ದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸ್ಯ 1895ನೇ ಇಸವಿ ಜುಲೈ

ತಾರೀಖು 10ನೇ ಬುಧವಾರ ಹಗಲು 11 ಘಂಟೆಗೆ ಹಾಸನ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ವಳಪ ಡಿಸಿ ಬೇಲೂರು ತಾಲ್ಲೂಕು ಅವುಲ್‌ದಾರ್ರ ರೂಬರೂ ಬೇಲೂರು ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿ ಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು, ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್‌ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಜಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮ್ಮಿ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮ್ಮಿ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಅಪ್ಸೆಟ್‌ಪ್ರೈಸ್) ಪೈಕಿ ಯಾ ಜವಥಾ ಹಿಸ್ಸೆ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮ್ಮಿನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡ ದರೆ ದರಖಾಸ್ತುದಾರನ ಪುರೂ ಶೇವಣೀ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್‌ಪ್ರೈಸ್‌ಯಾನೆ ನಿಯಮವಾದ ಸರ್ಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೇ ಖರ್ಚು ಮೊಬಲಗು ಮತ್ತು ಸರ್ಕಾರಕ್ಕೇನೇ ಯಜಮಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರ್ಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಶೇವಣೀ ಮೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಪುರೂ ಡಿಪಾಜಿಟ್ ಮೊಬಲಗು ಭರ್ತಿಗೆ ಒಳಪಟ್ಟು ಆಖೈರ್ ಜಡದ ರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯುಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಜೆಯೇ ಆಖೈರ್ ಜಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಜಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕಿ ಮೊಬಲಗನ್ನು ಕೊಡದೆ ತಪ್ಪಿದರೆ ಶೇವಣೀ ಮೊಬಲಗಿನಲ್ಲಿ ಹರಾ ಜಿನ ಖರ್ಚು ಜಾತಾ ಬಾಕಿ ಉಳದದ್ದನ್ನ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೆ ಅವನ ಖರ್ಚಿನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮ್ಮಿ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿ ಯಾಗಿರಬೇಕು, ಆದರೆ ಜಾಸ್ತೀ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು. ನಂತರ ನಡದ ಹರಾಜಿನಲ್ಲಿ ಹುಟ್ಟಿ ದ ಮೊಬಲಗು, ಹಣ ಕೊಡಲು ತಪ್ಪಿದಂಥಾ ಪುರೂ ಹರಾಜುದಾರನ ಸವಾಲ್ ಮೊಬಲಗಿಂತಲೂ ಕಮ್ಮಿಯಾದಲ್ಲಿ ಆ ಮೇರೆ ಕಮ್ಮಿಯಾ ದ ಮೊಬಲಗನ್ನ ಸದರೀಯವನಿಂದ ರವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮ್ಮಿನನ್ನು ಪುರೂ ಮೂರು ಸಾಲ್ ಆಕಾರವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸ ತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮ್ಮಿನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರ ಲು ಪ್ರಮಾಣಿಕವಾದ ಪ್ರಯತ್ನ ಮಾಡದೆ ಆದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾ ದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮ್ಮಿನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಪುರೂ ಸಾಲ್ ಲಾಗಾ ಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೇ ನಂಬರ್.	ದರಖಾಸ್ತುದಾರನ ಹೆಸರು.	ಜಮ್ಮಿ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮ್ಮಿನಿನ, ವಿಸ್ತೀರ್ಣ.	ಪ್ರಕಾರ.	ಪರಾ.
2 ಪೈಕಿ ಪೋಡಾದ ನಂಬರು 172.	ಮಿಸ್ಟರ್ ಜೆ. ಜಿ. ಎಚ್. ಕ್ಯಾಫರ್ಡ್ ಸಾಹೆಬರು.	ದೊಡ್ಡ ಬಿಕ್ಕೋಡು ಗ್ರಾಮ.	ಉತ್ತರಕ್ಕೆ—ಸರ್ವೇ ನಂ. 7, 8, 9, 10 ಮತ್ತು ಮಾಳೆ ದಕ್ಷಿಣಕ್ಕೆ—ಸರ್ವೇ 2ನೇ ನಂಬರು ಪೈಕಿ ಭಾಗ ಪೂರ್ವಕ್ಕೆ—ಸರ್ವೇ ನಂ. 88 ಮತ್ತು 1 ಪಶ್ಚಿಮಕ್ಕೆ—ಸರ್ವೇ 2ನೇ ನಂಬರು ಪೈಕಿ ಭಾಗ	ಗು. ನಾ. 109—24		ಖಾಯಂ ಕಂದಾಯ ಎಕರೆ 1ಕ್ಕೆ 1—8—0 ಹಂಗಾಮಿ ಕಂದಾಯ ಡಿಟೋ 1—0—0 ಜಮ್ಮಿ ಪಡಿಯುವನ ಇಷ್ಟ ಪಂಚಾಯತು ನಿರ್ಧರಿಸಲ್ಪಡತಕ್ಕದ್ದು.

ತಿಳುವಳಿಕೆ ಪರಾ,—ಒಂದು ಸರ್ವೇ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಚ್ಚಾ ಅಳತೇ ಪ್ರಕಾರ ಅಂದಾಜು ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರೆಗೆ ಗಣನೀಯವಾದಷ್ಟು ಕಮ್ಮಿ ಜಾಸ್ತಿ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟ್ ಪ್ರೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೇ ಆಗಲಿ ಜಮ್ಮಿ ಹಿಡುವಳಿದಾರನು ಬದ್ಧ ವ ಅರ್ಹನಾಗಿರಬೇಕು.

ಪಿ. ಎ. ಪೂರ್ಣಯ್ಯ,
ಡೆಪ್ಯೂಟಿ ಕಮ್ಮಿಷನರ್.